International Journal of Kannada Research 2020; 6(2): 92-96

International Journal of Kannada Research
www.kannadajournal.com

**ISSN: 2454–5813**
IJKR 2020; 6(2): 92-96
© 2020 IJKR
www.kannadajournal.com
Received: 12-01-2020
Accepted: 16-02-2020

**ಕೆ ಮಂಜುನಾಥ**
ಸಹಾಯಕ ಪ್ರಾಧ್ಯಾಪಕ,
ಕನ್ನಡ ವಿಭಾಗ
ಶ್ರೀ ಬಸವೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಮಾಯಕೊಂಡ, ಕರ್ನಾಟಕ,
ಭಾರತ

**Corresponding Author:**
**ಕೆ ಮಂಜುನಾಥ**
ಸಹಾಯಕ ಪ್ರಾಧ್ಯಾಪಕ,
ಕನ್ನಡ ವಿಭಾಗ
ಶ್ರೀ ಬಸವೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಮಾಯಕೊಂಡ, ಕರ್ನಾಟಕ,
ಭಾರತ

# ಪ್ರಬಂಧದ ಶೀರ್ಷಿಕೆ: 'ನೇಗಿಲಯೋಗಿ'– ಶರಣ ಒಕ್ಕಲಿಗ ಮುದ್ದಣ್ಣ

**ಕೆ ಮಂಜುನಾಥ**

## ಅಮೂರ್ತ
ಸಾವಿರಾರು ವರ್ಷಗಳ ಇತಿಹಾಸವುಳ್ಳ ಕನ್ನಡ ಸಾಹಿತ್ಯದಲ್ಲಿ ಮಾನವೀಯ ಮೌಲ್ಯಗಳಿಗೇನು ಕೊರೆತೆಯಿಲ್ಲ. ಮಧ್ಯಕಾಲಿನ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ನೆಲೆಯಿಂದ ಗುರುತಿಸಬಹುದಾದ ಸಾಹಿತ್ಯಗಳಲ್ಲಿ ವಿಭಿನ್ನವಾಗಿ ರಚಿತವಾಗಿರುವ ಸಾಹಿತ್ಯವೇ ವಚನ ಸಾಹಿತ್ಯವಾಗಿದೆ. ಹಾಡಿದರೆ ಹಾಡಿನ ರುಚಿ, ಕೇಳಿದರೆ ಗದ್ಯ ಬರಹದಂತೆ ಭಾಸವಾಗುವ ಪದ್ಯ ಮತ್ತು ಗದ್ಯಕ್ಕಿಂತ ವಿನೂತವಾಗಿ ದಿನನಿತ್ಯದ ಜನಸಾಮಾನ್ಯರ ಅನುಭವಗಳನ್ನೆ ಸಾಹಿತ್ಯ ರೂಪದಲ್ಲಿ ಕಟ್ಟಿಕೊಟ್ಟ ಸಾಹಿತ್ಯವಾಗಿದೆ.
ವಚನಗಳಲ್ಲಿ ಕಂಡು ಬರುವ ವಿಶಿಷ್ಟ ಮೌಲ್ಯಗಳಲ್ಲಿ ಬಹುತೇಕ ಮನುಷ್ಯ ನಡಾವಳಿಗಳು, ಬದುಕುವ ರೀತಿ, ನೀತಿ ಸಮಾಜದ ಅಂಕು–ಡೊಂಕು ಮುಂತಾದ ವಿಷಯಗಳ ಬಗ್ಗೆ ಚರ್ಚೆ ಮಾಡುತ್ತ ಮಾನವೀಯ ನೆಲೆಯಲ್ಲಿ ಹೇಗೆ ಬಗೆಹರಿಸಬಹುದನ್ನು ವಚನಗಳ ಉದಾಹರಣೆಯೊಂದಿಗೆ ಹೇಳುತ್ತಾರೆ..
ಸು.1160ರ ಕಾಲಮಾನದಲ್ಲಿ ಜೋಳದಹಾಳೆಂಬ ಗ್ರಾಮಕ್ಕೆ ಸೇರಿದವನಾದ ಈ ಶರಣ, ಬೇಸಾಯ ವೃತ್ತಿಯನ್ನು ಕೈಗೊಂಡು ಬದುಕು ಸಾಗಿಸಿದವನು. ಜೊತೆಗೆ ಜಂಗಮ ದಾಸೋಹ ನಡೆಸುವುದು ಈತನ ನಿತ್ಯವ್ರತವಾಗಿತ್ತು. ರಾಜನು ಕೇಳಿದ ಹೆಚ್ಚಿನ ತೆರಿಗೆಯನ್ನು ಕೊಡದೆ ಆ ಹಣವನ್ನು ದಾಸೋಹಕ್ಕಾಗಿ ವಿನಿಯೋಗಿಸುವುದರ ಮೂಲಕ ಸಾಮಾಜಿಕ ಕಾಳಜಿ ಮೆರೆದವನಾಗಿದ್ದಾನೆ.
'ಕಾಮಭೀಮ ಜೀವಧನದೊಡೆಯ' ಅಂಕಿತದಲ್ಲಿ ರಚಿಸಿದ ಈತನ 12 ವಚನಗಳು ದೊರೆತಿವೆ. ಈತನ ವಚನಗಳಲ್ಲಿ ವಿಚಾರದ ಬೆಳಕಿದೆ. ರೈತರಿಗೆ ಸಲಹೆಯಿದೆ, ಸಮಾಜಕ್ಕೆ ಉಪಯೋಗವಾಗಬಲ್ಲ ವಿವೇಚನೆ ಮತ್ತು ವಿಶ್ಲೇಷಣೆಗಳು ಹಾಸು ಹೊಕ್ಕಾಗಿವೆ. ಒಕ್ಕಲುತನ ವೃತ್ತಿಯ ಪರಿಭಾಷೆ, ಮುಗ್ಧ ಭಕ್ತಿ, ಸರಳ, ಪ್ರಾಸಾದಿಕ ಶೈಲಿಯಿಂದ ಅವು ನಳನಳಿಸುತ್ತವೆ. ಬೇಸಾಯದ ಪರಿಭಾಷೆಯಲ್ಲಿ ಆಧ್ಯಾತ್ಮಿಕ ವಿಷಯಗಳನ್ನು ತನ್ನ ವಚನಗಳಲ್ಲಿ ಪ್ರಸ್ತಾಪಿಸುವನು.

**ಕೀಲಿ ಪದಗಳು:** ಒಕ್ಕಲಿಗ ಮುದ್ದಣ್ಣ, ಕೃಷಿ ಕಾಯಕದ ಶರಣರು, ಬೇಸಾಯದ ಶರಣರು, ಕಾಮಭೀಮ ಜೀವಧನದೊಡೆಯ, ಒಕ್ಕಲುತನದ ವಚನಕಾರರು, ಲಿಂಗ ಬೇಸಾಯ

## ಪರಿಚಯ
ಸಾವಿರಾರು ವರ್ಷಗಳ ಇತಿಹಾಸವುಳ್ಳ ಕನ್ನಡ ಸಾಹಿತ್ಯದಲ್ಲಿ ಮಾನವೀಯ ಮೌಲ್ಯಗಳಿಗೇನು ಕೊರೆತೆಯಿಲ್ಲ. ಸಾಹಿತ್ಯವೆನ್ನುವುದೇ ಮಾನವೀಯ ಮೌಲ್ಯಗಳ ಆಗರವೆನ್ನಬಹುದು. ಸಾಹಿತ್ಯವು ಜನಸಮುದಾಯದ ಅನುಭವಗಳನ್ನು ಅರಗಿಸಿಕೊಂಡ ರಸಪಾಕವಾಗಿದೆ. ಮಧ್ಯಕಾಲಿನ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ನೆಲೆಯಿಂದ ಗುರುತಿಸಬಹುದಾದ ಸಾಹಿತ್ಯಗಳಲ್ಲಿ ವಿಭಿನ್ನವಾಗಿ ರಚಿತವಾಗಿರುವ ಸಾಹಿತ್ಯವೇ ವಚನ ಸಾಹಿತ್ಯವಾಗಿದೆ. ಹಾಡಿದರೆ ಹಾಡಿನ ರುಚಿ, ಕೇಳಿದರೆ ಗದ್ಯ ಬರಹದಂತೆ ಭಾಸವಾಗುವ ಪದ್ಯ ಮತ್ತು ಗದ್ಯಕ್ಕಿಂತ ವಿನೂತವಾಗಿ ದಿನನಿತ್ಯದ ಜನಸಾಮಾನ್ಯರ ಅನುಭವಗಳನ್ನೆ ಸಾಹಿತ್ಯ ರೂಪದಲ್ಲಿ ಕಟ್ಟಿಕೊಟ್ಟ ಸಾಹಿತ್ಯವಾಗಿದೆ. ವಚನ ಸಾಹಿತ್ಯ ಎಂಬುದು ಕೊನೆಯಿರದ ತೀರ, ಅದರಲ್ಲಿ ಮಾನವ ನೆಮ್ಮದಿ ಜೀವನಕ್ಕೆ ಅಗತ್ಯವಿರುವ ಸಂಸ್ಕಾರ, ಸಂಸ್ಕೃತಿ ಅಡಗಿದೆ. ಅದನ್ನು ಅರಿತು ಮುನ್ನಡೆದವನೆ ನಿಜ ಶರಣನಾಗುತ್ತಾನೆ. ಬಸವಾದಿ ಶರಣರು ತಮ್ಮ ವಚನಗಳ ಮೂಲಕ ಸರಳವಾಗಿ ಜೀವನಮೌಲ್ಯ, ವೈಚಾರಿಕ ಬದುಕು, ಮೌಢ್ಯಗಳ ಧಿಕ್ಕಾರವನ್ನು ಹರಡಿದರು ವಚನಗಳಲ್ಲಿ ಕಂಡು ಬರುವ ವಿಶಿಷ್ಟ ಮೌಲ್ಯಗಳಲ್ಲಿ ಬಹುತೇಕ ಮನುಷ್ಯ ನಡಾವಳಿಗಳು, ಬದುಕುವ ರೀತಿ, ನೀತಿ ಸಮಾಜದ ಅಂಕು–ಡೊಂಕು ಮುಂತಾದ ವಿಷಯಗಳ ಬಗ್ಗೆ ಚರ್ಚೆ ಮಾಡುತ್ತ ಮಾನವೀಯ ನೆಲೆಯಲ್ಲಿ ಹೇಗೆ

ಬಗೆಹರಿಸಬಹುದನ್ನು ವಚನಗಳ ಉದಾಹರಣೆಯೊಂದಿಗೆ ಹೇಳುತ್ತಾರೆ. ಅನುಭವಗಳ ಮತ್ತು ಅನುಭಾವದ ಅಭಿವ್ಯಕ್ತಿ ಮಾಧ್ಯಮವನ್ನಾಗಿ ವಚನವನ್ನು ಜನಸಂಪರ್ಕ ಮಾಧ್ಯಮವನ್ನಾಗಿ ಮಾನವೀಯ ನೆಲೆಯಲ್ಲಿ ಬಳಸಿದ ಸಾಹಿತ್ಯವೇ ವಚನಸಾಹಿತ್ಯವಾಗಿದೆ.

ಅಂತಹ ವಚನಸಾಹಿತ್ಯದ ನೆಲದಲ್ಲಿ ವ್ಯವಸಾಯದ ನೇಗಿಲ ಹಿಡಿದಿದ್ದ ಒಕ್ಕಲಿಗ ಮುದ್ದಣ್ಣ ಅಂಗ ಬೇಸಾಯದ ಜೊತೆಯಲ್ಲಿ ಲಿಂಗ ಬೇಸಾಯವನ್ನು ಮಾಡುವ ಮೂಲಕ ಬಸವಾದಿ ಶರಣರ ಪರಂಪರೆಯಲ್ಲಿ ರೈತನಾಗಿ ಕಾಯಕ ಮಾಡುವ ಮೂಲಕ ಒಕ್ಕಲುತನ ಶ್ರೇಷ್ಠ ಉದ್ಯೋಗ ಎಂದು ಜಗಕೆ ಸಾರಿದ ಧೀಮಂತ ಅನುಭಾವಿ.

**ಒಕ್ಕಲಿಗ ಮುದ್ದಣ್ಣನ ಜೀವನ:**

ಸು.1160ರ ಕಾಲಮಾನದಲ್ಲಿ ಜೋಳದಹಾಳೆಂಬ ಗ್ರಾಮಕ್ಕೆ ಸೇರಿದವನಾದ ಈ ಶರಣ, ಬೇಸಾಯ ವೃತ್ತಿಯನ್ನು ಕೈಗೊಂಡು ಬದುಕು ಸಾಗಿಸಿದವನು. ಜೊತೆಗೆ ಜಂಗಮ ದಾಸೋಹ ನಡೆಸುವುದು ಈತನ ನಿತ್ಯವ್ರತವಾಗಿತ್ತು. ರಾಜನು ಕೇಳಿದ ಹೆಚ್ಚಿನ ತೆರಿಗೆಯನ್ನು ಕೊಡದೆ ಆ ಹಣವನ್ನು ದಾಸೋಹಕ್ಕಾಗಿ ವಿನಿಯೋಗಿಸುವುದರ ಮೂಲಕ ಸಾಮಾಜಿಕ ಕಾಳಜಿ ಮೆರೆದವನಾಗಿದ್ದಾನೆ.

'ಕಾಮಭೀಮ ಜೀವಧನದೊಡೆಯ' ಅಂಕಿತದಲ್ಲಿ ರಚಿಸಿದ ಈತನ 12 ವಚನಗಳು ದೊರೆತಿವೆ. ಈತನ ವಚನಗಳಲ್ಲಿ ವಿಚಾರದ ಬೆಳಕಿದೆ. ರೈತರಿಗೆ ಸಲಹೆಯಿದೆ, ಸಮಾಜಕ್ಕೆ ಉಪಯೋಗವಾಗಬಲ್ಲ ವಿವೇಚನೆ ಮತ್ತು ವಿಶ್ಲೇಷಣೆಗಳು ಹಾಸು ಹೊಕ್ಕಾಗಿವೆ. ಒಕ್ಕಲುತನ ವೃತ್ತಿಯ ಪರಿಭಾಷೆ, ಮುಗ್ಧ ಭಕ್ತಿ, ಸರಳ, ಪ್ರಾಸಾದಿಕ ಶೈಲಿಯಿಂದ ಅವು ನಳನಳಿಸುತ್ತವೆ. ಬೇಸಾಯದ ಪರಿಭಾಷೆಯಲ್ಲಿ ಆಧ್ಯಾತ್ಮಿಕ ವಿಷಯಗಳನ್ನು ತನ್ನ ವಚನಗಳಲ್ಲಿ ಪ್ರಸ್ತಾಪಿಸುವನು. ಚಾತುರ್ವರ್ಣ್ಯಗಳಲ್ಲಿ ಮೊದಲ ಮೂರನ್ನು ಹೇಳಿ, ಕೊನೆಯದಾದ ಶೂದ್ರನನ್ನು ಹೇಳುವಾಗ ಉಳುವ ಒಕ್ಕಲ ಮಗನ ತಪ್ಪ ನೋಡದೆ ಒಪ್ಪುಗೊಳ್ಳಯ್ಯಾ ಎಂದು ತನ್ನ ಇಷ್ಟದೈವದಲ್ಲಿ ಪ್ರಾರ್ಥಿಸುವನು.

**ದೊರೆತ ಆ 12 ವಚನಗಳು[1] ಇಂತಿವೆ:**

1. ಅಂಗವೆ ಭೂಮಿಯಾಗಿ, ಲಿಂಗವೆ ಬೆಳೆಯಾಗಿ, ವಿಶ್ವಾಸವೆಂಬ ಬತ್ತ ಒಲಿದು ಉಂಡು ಸುಖಿಯಾಗಿರಬೇಕೆಂದ ಕಾಮಭೀಮ ಜೀವಧನದೊಡೆಯ.
2. ಆವ ವರ್ಣವ ಕೂಡಿದಡೂ ಅಪ್ಪುಮಯ ತಪ್ಪದಂತೆ,  
ಸರ್ವಗುಣಸಂಪನ್ನನಾದಲ್ಲಿ ಭಕ್ತನೆಂದಡೂ ತಾನಾಗಿ,  
ಮಹೇಶ್ವರ[ನೆಂ]ದಡೂ ತಾನಾಗಿ,  
ಪ್ರಸಾದಿಯೆಂದಡೂ ತಾನಾಗಿ, ಪ್ರಾಣಲಿಂಗಿಯೆಂದಡೂತಾನಾಗಿ,  
ಶರಣನೆಂದಡೂ ತಾನಾಗಿ, ಐಕ್ಯನೆಂದಡೂ ತಾನಾಗಿ,  
ಒಂದನಹುದು ಒಂದನಲ್ಲಾ ಎನ್ನದೆ  
ಕತ್ತಲೆಯಲ್ಲಿ ಹಾಲಕೊಂಡಡೆ ಸಿಹಿ ತಪ್ಪುವುದೆ?  
ಸತ್ತು ಚಿತ್ತು ಆನಂದವೆಂಬ ಗೊತ್ತ ಹರಿದವಂಗೆ  
ತಟ್ಟು ಮುಟ್ಟು ಹತ್ತುವ ಭಾವ ಒಂದೂ ಇಲ್ಲ, ಕಾಮಭೀಮ ಜೀವಧನದೊಡೆಯ ತಾನು ತಾನೆ.
3. ಕುಂಭದ ಮಳೆ ಹೊಯ್ಯಿತ್ತು.  
ಮೂರಂಗದ ನೇಗಿಲ ತರಿಯಬೇಕು.  
ಆರಂಗದ ಭೂಮಿಯಲ್ಲಿ ಅರಸಲಾಗಿ ಒಂದೆ ಮರ ಹುಟ್ಟಿತ್ತು.  
ಹುಟ್ಟುವಾಗ ಮರ ಮೂರು ಕವೆ, ಅಲ್ಲಿಂದತ್ತಾರು ಕವೆಯಾಯಿತ್ತು.  
ಆ ಆರರ ಮಧ್ಯದಲ್ಲಿ ಮೂವತ್ತಾರು ಕವೆಯಾಯಿತ್ತು.  
ಆ ಮೂವತ್ತಾರರ ಮಧ್ಯದಲ್ಲಿ ನೂರೊಂದು ಕೊಂಬೆ ಶಾಖೆಗೂಡಿತ್ತು.  
ಆ ಮರನನೇರಿ ಹಿಂದುಮುಂದಣ ಕೊಂಬೆ ಕಳೆದು  
ಕೊಡಲಿಯಾಡೋದಕ್ಕೆ ತೆರಪಮಾಡಿ, ನಡುವಣ ಕೊಂಬೆ ಕಡೆವುತ್ತಿರಲಾಗಿ,  
ಒಂದು ಹೊಯಿಲಿಗೆ ಇದರಂಗದ ತೊಪ್ಪೆ ಹರಿದು,  
ಉಭಯಕ್ಕೆ ದಿಂಡು ಹರಿದು,  
ತ್ರಿವಿಧಕ್ಕೆ ಗರ್ಭಗೆಚ್ಚು ಖಂಡಿತವಾಯಿತ್ತು.  
ಮರ ತಟ್ಟಾರಬೇಕೆಂದು ಇರಿಸಿ ಬಂದೆ, ಕಾಮಭೀಮ ಜೀವಧನದೊಡೆಯ ನೀನೆ ಬಲ್ಲೆ.
4. ಕ್ರೋಧ ಬಂದಲ್ಲಿ ಕೊಲ್ಲೆಂಬುದು,  
ದಯೆ ಬಂದಲ್ಲಿ ಬೇಡಾ ಎಂಬುದು,  
ಅದು ಅರಿವೊ? ಅಜ್ಞಾನವೊ? ಬೇರೊಂದು ಹೊಲಬೊ?  
ಮಾಡುವ ಕ್ರೀ ಜಡನೆಂಬುದು, ಕ್ರೀ ಹೊರಗಾದುದು ಅರಿವೆಂಬುದು,  
ಅದನರಿವುದು ಅದೇನು ಹೇಳಾ?  
ಆತ್ಮನರಿವೊ ಅದೇನು ಮರವೆಯೊ?  
ತೊಳೆದಡೆ ಮಡಿಯಾಗಿ ಮಾಸಿದಡೆ ಮೈಲಿಗೆಯಾಗಿ  
ಪುಸಿಯಹುದೊಂದೊ ಎರಡೊ?  
ಅರಿದಡೆ ತಾನೆಂಬ ಮರೆದಡೆ ಜಗವೆಂಬ  
ಉಭಯಕ್ಕೊಳಗಾಗದ ಮುನ್ನವೆ ಅರಿ, ಕಾಮಭೀಮ ಜೀವಧನದೊಡೆಯನ.
5. ದೊಡ್ಡವೆರಡು ಕಂಬದ ಮಧ್ಯದಲ್ಲಿ ಚಿಕ್ಕವೆರಡು ಕಂಬ.  
ಇಂತೀ ನಾಲ್ಕರ ಮಧ್ಯದ ಮನೆಗೆ  
ಅಸ್ಥಿಯ ಗಳು, ನರದ ಕಟ್ಟು, ಮಜ್ಜೆಯ ಸಾರ, ಮಾಂಸದ ಗೋಡೆ, ಚರ್ಮದ ಹೊದಿಕೆ,  
ಶ್ರೋಣಿತದ ಸಾರದ, ಕುಂಭದಿಂದಿಪ್ಪುದೊಂದು ಚಿತ್ರದ ಮನೆ ನೋಡಯ್ಯಾ.  
ಆ ಮನೆಗೊಂಬತ್ತು ಬಾಗಿಲು, ಇಡಾ ಪಿಂಗಳವೆಂಬ ಗಾಳಿಯ ಬಾದಳ,  
ಮೃದು ಕಠಿಣವೆಂಬವೆರಡು ಅಗುಳಿಯ ಭೇದ ನೋಡಾ,  
ಇತ್ತಲೆಯ ಮೇಲಿಪ್ಪ ಸುಷುಮ್ನಾನಾಳವ ಮುಚ್ಚಿ,  
ದಿವಾರಾತ್ರಿಯೆಂಬ ಅರುಹು ಮರಹಿನ ಉಭಯವ ಕದಕಿತ್ತು ನೋಡಯ್ಯಾ.  
ಮನೆ ನಷ್ಟವಾಗಿ ಹೋದಡೆಯೂ  
ಮನೆಯೊಡೆಯ ಮರಳಿ ಮತ್ತೊಂದು ಮನೆಗೆ ಒಪ್ಪುದುತಪ್ಪದು ನೋಡಯ್ಯಾ  
ಇಂತಪ್ಪ ಮನೆಗೆನ್ನ ಮರಳಿ ಬಾರದಂತೆ ಮಾಡಯ್ಯಾ, ಕಾಮಭೀಮ ಜೀವಧನದೊಡೆಯ ನಿಮ್ಮ ಧರ್ಮ ನಿಮ್ಮ ಧರ್ಮ.
6. ನೀ ಕೊಟ್ಟ ಭೂಮಿಗೆ ಮುಂದೆ ಕರಲು, ಹಿಂದೆ ಇಗ್ಗರಲು,  
ಅಲ್ಲಿಂದ ಆಚೆ ಮಧ್ಯಭೂಮಿ. ಮೂರು ನೆಲದ ಭೂಮಿಯ ಆರೈದು ಬೆಳೆದೆಹೆನೆಂದಡೆ, ಇದಾರ ವಶವೂ ಅಲ್ಲ,  
ಕಾಮಭೀಮ ಜೀವಧನದೊಡೆಯ ನೀನೆ ಬಲ್ಲೆ.
7. ಪೂರ್ವಕ್ಕೆ ತಾಳಾಗಿ ಉತ್ತರಕ್ಕೆ ತಲಹಾ ಬಿದ್ದ ಮರನ ತಂದು,  
ನಿಬದ್ಧಿಯ ಕಾರುಕನ ಕೈಯಲ್ಲಿ ಸುಬದ್ಧಿಸಿ, ಶುದ್ಧೈಸಿ  
ಅನಾದಿಯೆಂಬ ಹುಗಿಲುದೆಗೆದು,  
ಆದಿಯೆಂಬ ಈಯವನಿಕ್ಕಿ,  
ಇಷ್ಟವೆಂಬ ವಿಶ್ವಾಸದ ಮೇಳಿಯಂ ಬೆಟ್ಟಿ,

ಭಾವವೆಂಬ ಜಿಗುಳಿಯನಿಕ್ಕಿ,
ಸದ್ಭಾವವೆಂಬ ಗುಳುವ ತೊಡಿಸಿ,
ಸತ್ಕಿಯೆಯೆಂಬ ಕಣ್ಣಿಯಲ್ಲಿ ನೇಗಿಲ ತೊಡಚಿ,
ಜ್ಞಾನಚಕ್ಷುವೆಂಬ ನೊಗದ ಉಭಯದ ಕೊನೆಯಲ್ಲಿ
ಎಡಗೋಲಿನಲ್ಲಿ ಕಾರಿಯ ಹೂಡಿ,
ಬಲಗೋಲಿನಲ್ಲಿ ಬೆಳ್ಳಿಯ ಹೂಡಿ,
ಅಡಿ ಕೆತ್ತುವಂತೆ ಧಾಯೆಂದು ಹೊಡೆಯಲಾಗಿ,
ಭೂಮಿಯೊಡಗೂಡಿ ಸವೆಯಿತ್ತು.
ಬಿತ್ತವಟ್ಟಕ್ಕೆ ದಿಕ್ಕಿಲ್ಲ, ಕಾಮಭೀಮ ಜೀವಧನದೊಡೆಯ ನೀನೆ ಬಲ್ಲೆ.

8. ಪೈರಿಗೆ ನೀರು ಬೇಕೆಂಬಲ್ಲಿ ಉಚಿತವನರಿದು ಬಿಡಬೇಕು.
ಕ್ರೀಗೆ ಅರಿವು ಬೇಕೆಂಬಲ್ಲಿ ಉಭಯನರಿದು ಘಟಿಸಬೇಕು.
ಏರಿ ಹಿಡಿವನ್ನಕ್ಕ ನೀರ ಹಿಡಿದಡೆ ಸುಖವಲ್ಲದೆ ಮೀರಿದರುಂಟೆ?
ಕ್ರೀಯ ಬಿಡಲಿಲ್ಲ, ಅರಿವ ಮರೆಯಲಿಲ್ಲ.
ಬೆಳೆಯ ಕೊಯಿದ ಮತ್ತೆ, ಹೊಲಕ್ಕೆ ಕಾವಲುಂಟೆ?
ಫಲವ ಹೊತ್ತ ಪೈರಿನಂತೆ, ಪೈರನೊಳಕೊಂಡ ಫಲದಂತೆ,
ಅರಿವು ಆಚರಣೆಯೆಲ್ಲ ನಿಂದು,
ಆಚರಣೆ ಅರಿವಿನಲ್ಲಿ ಲೇಪನಾದ ಮತ್ತೆ ಕಾಮಭೀಮ ಜೀವಧನನೊಡೆಯನೆಂಬುದ ಭಾವಿಸಲಿಲ್ಲ.

9. ಭಕ್ತಿಯೆಂಬ ಪೃಥ್ವಿಯಲ್ಲಿ ಗುರೂಪದೇಶವೆಂಬ ನೇಗಿಲಂ ಪಿಡಿದು,
ಅಂತಃಕರಣ ಚತುಷ್ಟಯವೆಂಬ ಪಶುವಂ ಕಟ್ಟಿ
ಓಂಕಾರನಾದವೆಂಬ ಸೆಳೆಕೋಲಂ ಪಿಡಿದು
ಉತ್ತರ ಕ್ರೀಯೆಂಬ ಸಾಲನೆತ್ತಿ
ದುಃಕರ್ಮವೆಂಬ ಕಂಟಕದ ಗುಲ್ಮವಂ ಕಡಿದು
ಅರುಹೆಂಬ ರವಿಯ ಕಿರಣದಿಂದ ಒಣಗಿಸಿ
ಅವಂ ಕೂಡಲೊಟ್ಟಿ, ಜ್ಞಾನಾಗ್ನಿಯೆಂಬ ಅಗ್ನಿಯಿಂದ ಸುಟ್ಟುರುಹಿ
ಆ ಹೊಲನಂ ಹಸಮಾಡಿ, ಬಿತ್ತುವ ಪರಿ ಇನ್ನಾವುದಯ್ಯಾ ಎಂದಡೆ:
ನಾದ. ಬಿಂದು, ಕಳೆ, ಮಳೆಗಾಲದ ಹದಬೆದೆಯನರಿದು
ಸ್ಥೂಲವೆಂಬ ದಿಂಡಿಗೆ ತ್ರಿದೇವರೆಂಬ ತಾಳ ನಟ್ಟು
ಇಡಾಪಿಂಗಳ ಸುಷುಮ್ನಾನಾಳವೆಂಬ ಕೋವಿಗಳ ಜೋಡಿಸಿ,
ಮೇಲೆ ತ್ರಿಕೂಟಸ್ಥಾನವೆಂಬ ಬಟ್ಟಲಂ ಬಲಿದು,
ಕುಂಡಲೀಸರ್ಪನೆಂಬ ಹಗ್ಗವ ಸೇದಿ ಕಟ್ಟಿ,
ಹಂಸನೆಂಬ ಎತ್ತಂ ಹೂಡಿ,
ಪ್ರಣವನೆಂಬ ಬೀಜವ ಪಶ್ಚಿಮ ಮುಖಕ್ಕೆ ಬಿತ್ತಿ,
ಸರ್ವಶಾಂತಿ ನಿರ್ಮಲವೆಂಬ ಮೇಘ ಸುರಿಯಲ್ಕೆ
ನೀಲಬ್ರಹ್ಮವೆಂಬ ಸಸಿ ಹುಟ್ಟಿತ್ತ.
ಆ ಸಸಿಯ ಮುಟ್ಟುವ ಸಪ್ತವರ್ಣದ ಸದೆಯ ಕಳೆದು
ಅಷ್ಟವರ್ಣದ ಅಲಬಂ ಕಿತ್ತು, ದಶವಾಯುವೆಂಬ ಕಸಮಂ ತೆಗೆದು,
ಆ ಸಸಿ ಪಸರಿಸಿ ಪ್ರಜ್ವಲಿಸಿ ಫಲಕ್ಕೆ ಬರಲಾಗಿ
ಚತುರ್ವಿಧವೆಂಬ ಮಂಚಿಗೆಯಂ ಮೆಟ್ಟಿ
ಬಾಲಚಂದ್ರನೆಂಬ ಕವಣೆಯಂ ಪಿಡಿದು
ಪ್ರಪಂಚುವೆಂಬ ಹಕ್ಕಿಯಂ ಸೋವಿ
ಆ ಬತ್ತ ಬಲಿದು ನಿಂದಿರಲು,
ಕೊಯ್ದುಂಬ ಪರಿ ಇನ್ನಾವುದಯ್ಯಾ ಎಂದಡೆ:
ಇಷ್ಟವೆಂಬ ಕುಡುಗೋಲಿಗೆ ಪ್ರಣವವೆಂಬ ಹಿಡಿಯಂ ತೊಡಿಸಿ,
ಭಾವವೆಂಬ ಹಸ್ತದಿಂ ಪಿಡಿದು, ಜನನದ ನಿಲವಂ ಕೊಯ್ದು,
ಮರಣದ ಸಿವುಡ ಕಟ್ಟಿ, ಆಕಾಶವೆಂಬ ಬಣವೆಯನೊಟ್ಟಿ
ಉನ್ಮನಿಯೆಂಬ ತೆನೆಯನ್ನರಿದು, ಮನೋರಥವೆಂಬ ಬಂಡಿಯಲ್ಲಿ ಹೇರಿ,
ಮುಕ್ತಿಯೆಂಬ ಕೋಟಾರಕ್ಕೆ ತಂದು,
ಅಷ್ಟಾಂಗಯೋಗವೆಂಬ ಜೀವಧನದಿಂದೊಕ್ಕಿ,
ತಾಪತ್ರಯದ ಮೆಟ್ಟನೇರಿ, ಪಾಪದ ಹೊಟ್ಟ ತೂರಿ,
ಪುಣ್ಯದ ಬೀಜಮಂ [ತ]ಳೆದು
ಷಡುವರ್ಗ ಷಡೂರ್ಮೆಯೆಂಬ ಬೇಗಾರಮಂ ಕಳೆದು
ಅಂಗಜಾಲನ ಕಣ್ಣ[ಮು]ಚ್ಚಿ, ಚಿತ್ರಗುಪ್ತರೆಂಬ ಕರಣಿಕರ ಸಂಪುಟಕೆ ಬರಿಸದೆ
ಯಮರಾಜನೆಂಬರಸಿಗೆ ಕೋರನಿಕ್ಕದೆ
ಸುಖ ಶಂಕರೋತಿ ಶಂಕರೋತಿ ಎಂಬ ಸಯಿದಾನವನುಂಡು
ಸುಖಿಯಾಗಿಪ್ಪ ಒಕ್ಕಲಮಗನ ತೋರಿ ಬದುಕಿಸಯ್ಯಾ,
ಕಾಮಭೀಮ ಜೀವಧನದೊಡೆಯ ಪ್ರಭುವೆನಿಮ್ಮ ಧರ್ಮ, ನಿಮ್ಮ ಧರ್ಮ..

10 ವರುಣನ ಕಿರಣದಿಂದ
ಅಪ್ಪುವಿನ ಸಾರ ಪೃಥ್ವಿಯೊಳಡಗಿದ್ದು
ಪೃಥ್ವಿಯ ತಪ್ಪಿಸಿ ತಾನೊಪ್ಪದಲ್ಲಿ ತೆಗವಂತೆ
ಅರಿವು-ಮರವೆ, ಪೃಥ್ವಿ-ಅಪ್ಪುವಿನಂತೆ ಇಪ್ಪ ಭೇದವ ತಾನರಿದು
ಜಡ-ಅಜಡವೆಂಬ ಉಭಯವರಿವುದು
ಸಕಲವೊ? ನಿಃಕಲವೊ? ಬೇರೊಂದು ಹೊಲಬೊ?
ನಿನ್ನೊಲವರವ ನೀನೆ ಬಲ್ಲೆ. ಕಾಮಭೀಮ ಜೀವಧನದೊಡೆಯ ನಾನೆಂದೂ ಅರಿಯೆ.

11. ಮೂರಡಿ ಮಣ್ಣಿಗೆ ಆರು ಹೊನ್ನ ತೆತ್ತು,
ಮೀರಿ ಹದಿಕೆಯ ಬೇಡೆನೆಂದು, ಈ ಗ್ರಾಮದವರ ಮುಂದಿಟ್ಟು
ಮೀರಲಿಲ್ಲಾಯೆಂದು ಪಟ್ಟೆಯ ಕೊಟ್ಟು,
ಮತ್ತೂರು ಗೂಡಿ ಹದಿಕೆಯ ಬೇಡಿದಡೆ, ನಾ ಕೊಡಲಿಲ್ಲ.
ನೀ ಕೊಟ್ಟ ಪಟ್ಟೆ
ನಮ್ಮ ನಟ್ಟನಡುಮನೆಯ ಐದುಕಾಲ ನೆಲಹಿನಲ್ಲಿ ಕಟ್ಟಿಯದೆಕೋ !
ನೀ ತಪ್ಪಿದಡೆ ನಿನಗೆ ಹೇಳುವ ಒಡೆಯರುಂಟೆ?
ನಾನೊಕ್ಕಲು ನೀನೊಡೆಯ.
ಮೀರಿ ಕೊಂಡಿಹೆನೆಂದಡೆ
ಮುನ್ನವೇ ಸಿದ್ಧಾಯ ಸೆರೆಗೆ ನಾನೊಳಗು.
ಗುತ್ತಿಗೆಕಾರಂಗೆ ಮತ್ತೆ ಕುಳವುಂಟೆ?
ಇನ್ನು ಕೊಟ್ಟೆನಾದೊಡೆಎನ್ನ ಹಟ್ಟಿಕೊಟ್ಟಿಗೆಯೊಡೆಯ ಕಾಮಭೀಮ ಜೀವಧನದಾಣೆ.

12. ವೇದಶಾಸ್ತ್ರವನೋದುವುದಕ್ಕೆ ಹಾರುವನಲ್ಲ,
ಇರಿದು ಮೆರೆವುದಕ್ಕೆ ಕ್ಷತ್ರಿಯನಲ್ಲ,
ವ್ಯವಹರಿಸುವುದಕ್ಕೆ ವೈಶ್ಯನಲ್ಲ.
ಉಳುವ ಒಕ್ಕಲಮಗನ ತಪ್ಪ ನೋಡದೆ ಒಪ್ಪುಗೊಳ್ಳಯ್ಯಾ,
ಕಾಮಭೀಮ ಜೀವಧನದೊಡೆಯ ನೀನೆ ಬಲ್ಲೆ.

**ರೈತ ಹಾಗೂ ಶೋಷಿತರ ಪರವಾದ ನಿಲುವು:**

"ವೇದಶಾಸ್ತ್ರವನೋದುವುದಕ್ಕೆ ಹಾರುವನಲ್ಲ,
ಇರಿದು ಮೆರೆವುದಕ್ಕೆ ಕ್ಷತ್ರಿಯನಲ್ಲ,
ವ್ಯವಹರಿಸುವುದಕ್ಕೆ ವೈಶ್ಯನಲ್ಲ.
ಉಳುವ ಒಕ್ಕಲಮಗನ ತಪ್ಪ ನೋಡದೆ ಒಪ್ಪುಗೊಳ್ಳಯ್ಯಾ,
ಕಾಮಭೀಮ ಜೀವಧನದೊಡೆಯ ನೀನೆ ಬಲ್ಲೆ."

ಎಂಬ ವಚನದ ಮೂಲಕ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಗಿಂತ ರೈತನ ಕಾಯಕವೇ ಶ್ರೇಷ್ಠವಾದ ಕಾಯಕ. ಹೀಗಾಗಿ ಅವನಲ್ಲಿ ತಪ್ಪು ಎಣಿಸದೆ ರೈತಾಪಿ ವರ್ಗವನ್ನು ಜೀವಕಾರುಣ್ಯದಿಂದ ನಡೆಸಿಕೊಳ್ಳಬೇಕು ಎಂದು ಸಾರುವುದರ ಮೂಲಕ ಈ ನೆಲದ ನೈಜ

ವಾರಸುದಾರರು ಹಾಗೂ ಆಧಾರ ಸ್ತಂಭಗಳ ಪರ ದನಿ ಎತ್ತುತ್ತಾರೆ ಒಕ್ಕಲಿಗ ಮುದ್ದಣ್ಣ.

ನಾವೆಲ್ಲ ನಿಷ್ಠೆಯಿಂದ ಪೂಜಿಸುವ ದೇವರ ತಂಗುದಾಣವನ್ನು ನಿರ್ಮಿಸುವವರು ಕೃಷಿ ಕಾಯಕದ ಕೂಲಿ ಕಾರ್ಮಿಕರು. ಆ ನಂತರ ಅನವರತ ಆ ದೇವರ ವಾರಸುದಾರರು ಪುರೋಹಿತರು. ವೇದ ಶಾಸ್ತ್ರಗಳನ್ನು ಅನಾಯಾಸವಾಗಿ ಓದಿಕೊಂಡು ಬರುವ ಪುರೋಹಿತರು ಶೂದ್ರರು ಬೆವರು ಸುರಿಸಿ ನಿರ್ಮಿಸಿದ ಮಂದಿರವನ್ನು ಅತಿಕ್ರಮಿಸಿ ಕೊಂಡು ದೇವರು ಮತ್ತು ಭಕ್ತರ ನಡುವೆ ತಡೆಗೋಡೆಯಾಗಿ ನಿಂತು ವ್ಯಾಪಾರ ಮಾಡುವ ವ್ಯವಸ್ಥೆ ಭಾರತದ ಬಹು ಮುಖ್ಯ ಸಮಸ್ಯೆ. ಬ್ರಾಹ್ಮಣರು ಸಮಾಜವನ್ನು ಚತುರ್ವರ್ಣಗಳಲ್ಲಿ ವಿಭಜಿಸಿದರು. ಶೂದ್ರರು ನಿರ್ಮಿಸಿದ ದೇವರ ಗುಡಿ ಬ್ರಾಹ್ಮಣರು ಅತಿಕ್ರಮಿಸಿ ಕುಳಿತರು. ಶೂದ್ರರು ತಯಾರಿಸಿದ ಯುದ್ಧ ಪರಿಕರಗಳನ್ನು ಕ್ಷತ್ರಿಯರು ಸಮರಲ್ಲಿ ಬಳಸಿ ಖ್ಯಾತಿ ಪಡೆದರು. ಶೂದ್ರರು ಉತ್ಪಾದಿಸಿದ ಜೀವನಾವಶ್ಯಕ ಪರಿಕರಗಳನ್ನು ಶೂದ್ರರಿಗೆನೇ ಮಾರಿ ವೈಶ್ಯರು ಲಾಭಗಳಿಸಿದರು. ಕೊನೆಗೆ ಬೆವರು ಹರಿಸಿ ದುಡಿದ ಶೂದ್ರರಿಗೆ ದುಡಿಯುವುದರ ಹೊರತು ಬೇರೆ ಸುಖ ಸಿಗಲೇಯಿಲ್ಲ. ಮುದ್ದಣ್ಣನು, ಇಂತಹ ನಯವಂಚನೆಯನ್ನು ಸರಿಯಾಗಿ ಗ್ರಹಿಸಿ ನಿಜವಾದ ಶ್ರಮಿಕರನ್ನು ಗುರುತಿಸಿ ಅವರನ್ನು ಮಾನ್ಯ ಮಾಡುತ್ತಾನೆ.

**ಅಂತರಂಗ – ಬಹಿರಂಗ ಸಾಮರಸ್ಯದ ಕೃಷಿ:**

"ಅಂಗವೆ ಭೂಮಿಯಾಗಿ, ಲಿಂಗವೆ ಬೆಳೆಯಾಗಿ,
ವಿಶ್ವಾಸವೆಂಬ ಬತ್ತ ಒಲಿದು ಉಂಡು ಸುಖಿಯಾಗಿರಬೇಕೆಂದ
ಕಾಮಭೀಮ ಜೀವಧನದೊಡೆಯ."

ಬಾಹ್ಯದ ಬೇಸಾಯದೊಂದಿಗೆ ಅಂತರಂಗದ ಕೃಷಿಯು ಹಾಸುಹೊಕ್ಕಿರುವುದನ್ನು ಈ ವಚನದಲ್ಲಿ ಮುದ್ದಣ್ಣನು ಸೊಗಸಾಗಿ ತಿಳಿಯಪಡಿಸಿದ್ದಾನೆ. ಹಾಗೆಯೇ, ಸರಳವಾಗಿ ಕಾಣುವ ಈ ವಚನದ ಸಾಲುಗಳು ಬೇರೆಯದೆ ಅಂತರಾಳವನ್ನು ಹೊಂದಿದೆ. ಸ್ವತಃ ಕೃಷಿ ಕಾಯಕ ಶರಣರಾದ ಒಕ್ಕಲಿಗ ಮುದ್ದಣ್ಣ, ಅಂಗವೆ ಭೂಮಿಯಾಗಿ, ಲಿಂಗವೆ ಬೆಳೆಯಾಗಿ ಎಂದು ಹೇಳುವಲ್ಲಿ ಅನುಭವ ಜನ್ಯವಾದ ಶರಣಪ್ರಜ್ಞೆ ಎದ್ದು ಕಾಣುತ್ತಿದೆ. ಅಂಗ–ಭೂಮಿ, ಲಿಂಗ–ಬೆಳೆಗಳು, ಐಹಿಕ ಲೋಕದ ಸಂಗತಿಗಳು, ಪ್ರಾಪಂಚಿಕ ಬದುಕಿನಲ್ಲಿ ಅವು ದ್ರವ್ಯ ಮಾತ್ರ. ಆದರೆ ಇಲ್ಲಿ ಅಂಗ–ಭೂಮಿ, ಲಿಂಗ – ಬೆಳೆ, ಎಂಬ ಕೃಷಿ ಕಾಯಕದ ಸಹಚರ್ಯದ ನುಡಿಗಟ್ಟುಗಳಾಗಿ ಬಂದಾಗ ಪ್ರಾಪ್ತವಾಗುವ ಅರ್ಥ ಸಿರಿವಂತಿಕೆ ಮನಸ್ಸಿನಲ್ಲಿ ನಾಟಿ ನಿಲ್ಲುತ್ತದೆ. ಶರಣರು ಹೇಳುವ ಕೃಷಿ ಕಾಯಕದ ಲಿಂಗಾಂಗ ಸಾಮರಸ್ಯದ ಧ್ವನಿ ಇಲ್ಲಿ ಮನನೀಯವಾಗಿದೆ ಎಂದರೆ ತಪ್ಪಾಗಲಾರದು, ಅವರ ಜೀವನ ಮುಡಿಪಾಗಿಟ್ಟಿದ್ದೇ ಈ ಕಾಯಕ ನೀತಿಯ ಮೌಲ್ಯದ ಮೇಲೆ.

ಶರಣರು ಮನುಷ್ಯನ ಕೃಷಿ ಕಾಯಕದ ವಿಶೇಷ ಗುಣವಾದ ವಿಶ್ವಾಸವನ್ನು ಬೆಳೆದು ತಂದ ಭತ್ತದ ಫಸಲಿಗೆ ಹೋಲಿಸಿದಾರೆ, ಉತ್ತಿಬಿತ್ತಿ ಬೆಳೆದ ಕೃಷಿ ಧಾನ್ಯವನ್ನು ಮನೆಗೆ ತರುವಲ್ಲಿನ ಶ್ರಮ ಹಾಗು ಸಂತೋಷ ಅವರ್ಣನೀಯ, ಹಾಗೆ ಬೆಳೆದು ಒಲಿದು ಬಂದು, ಫಸಲು ತೃಪ್ತಿ ನೀಡಬೇಕಾದ, ಕೃಷಿಕಾಯಕ ಫಲದ ಸಂಕೇತವಾದ ಧಾನ್ಯವು ಅವರ ಪಾಲಿಗೆ ಶ್ರೇಷ್ಠ, ಶ್ರದ್ಧೆಯ ಕಾಯಕವಾಗಿದೆ, ವಿಶ್ವಾಸ – ನಂಬುಗೆಗೆ ಸರಿ ಸಮಾನವಾಗಿದೆ ಎಂದು ಅರಿಯಬೇಕಿದೆ.

**ಪ್ರಜಾಪ್ರಭುತ್ವ ಮಾದರಿ ನಿಲುವು:**

"ಮೂರಡಿ ಮಣ್ಣಿಗೆ ಆರು ಹೊನ್ನ ತೆತ್ತು,
ಮೀರಿ ಹದಿಕೆಯ ಬೇಡೆನೆಂದು, ಈ ಗ್ರಾಮದವರ ಮುಂದಿಟ್ಟು
ಮೀರಲಿಲ್ಲಾಯೆಂದು ಪಟ್ಟೆಯ ಕೊಟ್ಟು,
ಮತ್ತೂರು ಗೂಡಿ ಹದಿಕೆಯ ಬೇಡಿದಡೆ, ನಾ ಕೊಡಲಿಲ್ಲ.
ನೀ ಕೊಟ್ಟ ಪಟ್ಟೆ
ನಮ್ಮ ನಟ್ಟನಡುಮನೆಯ ಐದುಕಾಲ ನೆಲಹಿನಲ್ಲಿ ಕಟ್ಟಿಯದೆ ಕೋ !
ನೀ ತಪ್ಪಿದಡೆ ನಿನಗೆ ಹೇಳುವ ಒಡೆಯರುಂಟೆ?
ನಾನೊಕ್ಕಲು ನೀನೊಡೆಯ.
ಮೀರಿ ಕೊಂಡಿಹೆನೆಂದಡೆ
ಮುನ್ನವೇ ಸಿದ್ಧಾಯ ಸೆರೆಗೆ ನಾನೊಳಗು.
ಗುತ್ತಿಗೆಕಾರಂಗೆ ಮತ್ತೆ ಕುಳವುಂಟೆ?
ಇನ್ನು ಕೊಟ್ಟೆನಾದೊಡೆಎನ್ನ ಹಟ್ಟಿಕೊಟ್ಟಿಗೆಯೊಡೆಯ ಕಾಮಭೀಮ
ಜೀವಧನದಾಣೆ."

ಎಂಬ ವಚನದಲ್ಲಿ ಒಕ್ಕಲಿಗ ಮುದ್ದಣ್ಣ ಶರಣರ ಕೃಷಿ ಕಾಯಕದಲ್ಲಿ ಇಟ್ಟ ಭಕ್ತಿ ಹಾಗೂ ಕೃಷಿಯಲ್ಲಿ ಬೆಳೆಯುವ ಧಾನ್ಯಗಳ ಬಗೆ, ತೆರಿಗೆ ಕಟ್ಟುವ ಕುರಿತು ಹಾಗೂ ದಾಸೋಹ ಸೇವೆ ಬಗ್ಗೆ ವಿವರವಾಗಿ ವಿವರಿಸಿದಾರೆ. ಶರಣರು ಆಧ್ಯಾತ್ಮ ಸಾಧನೆಗಾಗಿ ರಾಜಾಶ್ರಯಕ್ಕಿಂತಲೂ ಸರಳವಾದ ಕೃಷಿ ಕಾಯಕದ ಭಕ್ತಿ ಮಾರ್ಗವನ್ನು ಮುಂಚೂಣಿಯಲ್ಲಿ ಅದಾಗಲೇ ಹಾಕಿ ಕೊಟ್ಟಿದ್ದರು, ಅವರು ಕೃಷಿ ಕಾಯಕದ ಜ್ಞಾನವನ್ನು (ಹಸಿವನ್ನು) ಇಂಗಿಸಿಕೊಳ್ಳಲು ಒಕ್ಕಲಿಗ ಮುದ್ದಣ್ಣ ಶರಣ ಮಹಾಮನೆ– ಅನುಭವ ಮಂಟಪದ ಭಾಗವಾಗಿ ಸಾಧಕನಾದ. ಅತಿ ಹೆಚ್ಚು ತೆರಿಗೆ ಕಟ್ಟಲು ರಾಜ್ಯದ ಪ್ರತಿನಿಧಿಗಳು ಸೂಚಿಸಿದಾಗ, ಅದಕ್ಕೆ ಪ್ರತಿಭಟನೆ ಸೂಚಿಸಿ, ರಾಜನ ಮನ ಒಲಿಕೆಯ ಮೂಲಕ, ಸಮಸ್ತ ಕೃಷಿ ಕಾಯಕದ ಶರಣರ ರಕ್ಷಣೆಗೆ ಒಕ್ಕಲಿಗ ಮುದ್ದಣ್ಣ ನಿಲ್ಲುತ್ತಾನೆ. ಇದು ರಾಜಾಡಳಿತದ ಕಾಲದಲ್ಲಿ ಕೂಡ ನಡೆದ ಪ್ರಜಾಪ್ರಭುತ್ವ ಮಾದರಿ ಹೋರಾಟ. ಇದರ ಪರಿಣಾಮವೇನಾಯಿತು ಎಂಬುದು ಮುಖ್ಯವಲ್ಲ, ಮುದ್ದಣ್ಣ ಶರಣ ರೈತ ಮುಖಂಡನಾಗಿ, ಸಮಸ್ತ ಶರಣ ಸಂಕುಲವನ್ನು ಒಂದುಗೂಡಿಸಿ, ಅವರ ಅಭಿಪ್ರಾಯ ಒಟ್ಟುಗೂಡಿಸುವುದರಲ್ಲಿ ಯಶಸ್ವಿಯಾದರೆಂಬುವುದು ಗಮನಿಸಬೇಕಾದ ಸಂಗತಿಯಾಗಿದೆ. ಶರಣರು ಕಾಯಕದ ವಿನಯವಂತಿಕೆ ಮತ್ತು ಹೋರಾಟದ ಕೆಚ್ಚುಗಳೆರಡೂ ಮೇಳೈಸಿದ ಕೃಷಿ ಪಂಡಿತರಾಗಿದ್ದಾರೆ ಹಾಗಾಗಿ ಈ ವಚನದಲ್ಲಿ "ನೀ ತಪ್ಪಿದಡೆ ನಿನಗೆ ಹೇಳುವ.." ಮಾತು ಸಾಂದರ್ಭಿಕವಾಗಿದೆ. ಎಲ್ಲಾ ಶರಣರು ಕೃಷಿ ಕಾಯಕದ ಹಿನ್ನಲೆಯಲ್ಲಿಯೇ ಜೀವನ ದರ್ಶನ ಕಾಣಲು ಪ್ರಯತ್ನಿಸಿದಂತೆ ಕಾಣುತ್ತದೆ.

**ಅರಿವು – ಆಚರಣೆಯ ಬೇಸಾಯ:**

"ಪೈರಿಗೆ ನೀರು ಬೇಕೆಂಬಲ್ಲಿ ಉಚಿತವನರಿದು ಬಿಡಬೇಕು.
ಕ್ರೀಗೆ ಅರಿವು ಬೇಕೆಂಬಲ್ಲಿ ಉಭಯನರಿದು ಘಟಿಸಬೇಕು.
ಏರಿ ಹಿಡಿವನ್ನಕ್ಕ ನೀರ ಹಿಡಿದಡೆ ಸುಖವಲ್ಲದೆ ಮೀರಿದರುಂಟೆ?
ಕ್ರೀಯ ಬಿಡಲಿಲ್ಲ, ಅರಿವ ಮರೆಯಲಿಲ್ಲ.
ಬೆಳೆಯ ಕೊಯಿದ ಮತ್ತೆ, ಹೊಲಕ್ಕೆ ಕಾವಲುಂಟೆ?
ಫಲವ ಹೊತ್ತ ಪೈರಿನಂತೆ, ಪೈರನೊಳಕೊಂಡ ಫಲದಂತೆ,
ಅರಿವು ಆಚರಣೆಯೆಲ್ಲ ನಿಂದು,
ಆಚರಣೆ ಅರಿವಿನಲ್ಲಿ ಲೇಪನಾದ ಮತ್ತೆಕಾಮಭೀಮ
ಜೀವಧನನೊಡೆಯನೆಂಬುದ ಭಾವಿಸಲಿಲ್ಲ."

ಈ ವಚನವನ್ನು ನೋಡಿದರೆ, ಒಕ್ಕಲಿಗ ಮುದ್ದಣ್ಣನು ಕೃಷಿಯ ಅನುಭವದ ಮೂಲಕ ಅನುಭಾವದ ಎತ್ತರಕ್ಕೆ ಏರಿರುವುದನ್ನು ಕಾಣುತ್ತೇವೆ. ಪೈರಿಗೆ ಎಷ್ಟು ನೀರು ಬೇಕೋ ಅಷ್ಟು ಬಿಡಬೇಕು. ಕಡಿಮೆ ನೀರು ಬಿಟ್ಟರೆ ಪೈರು ಒಣಗುವುದು. ಹೆಚ್ಚು ನೀರು ಬಿಟ್ಟರೆ ಭೂಮಿ ಸವುಳಾಗಿ ಪೈರು ಕೊಳೆಯುವುದು. ಅರಿವಿಲ್ಲದ ಕ್ರಿಯೆಯಿಂದಾಗಿ ಇಂತಹ ಸಮಸ್ಯೆಗಳು ಹುಟ್ಟುತ್ತವೆ. ನಮ್ಮ ಕ್ರಿಯೆಗೆ ಅರಿವು ಬೇಕೆಂದರೆ ಕ್ರಿಯೆ ಮತ್ತು ಅರಿವಿನ ಸಂಬಂಧವನ್ನು

ಅರ್ಥೈಸಿಕೊಂಡು ಅವು ಪರಿಪೂರ್ಣವಾಗಿ ಒಂದಾಗುವಂತೆ ಮಾಡಬೇಕು. ಮಡಿಯ ಏರಿಯ ಸಾಮರ್ಥ್ಯದಷ್ಟೇ ನೀರಿನ ಸದುಪಯೋಗ ಮಾಡಿಕೊಂಡರೆ ನೀರಿನ ಕೊರತೆಯಾಗುವುದಿಲ್ಲ ಹಾಗೂ ಪೈರಿಗೂ ತೊಂದರೆಯಾಗುವುದಿಲ್ಲ. ಕರ್ತವ್ಯವನ್ನು ಅರಿವಿನೊಂದಿಗೆ ಅನುಸರಿಸಿದರೆ ಯಾವುದೇ ರೀತಿಯ ಹಾನಿ ಸಂಭವಿಸದೆ ಸುಖವಾಗಿರಬಹುದು. ಆದರೆ ಅರಿವು ಮತ್ತು ಕ್ರಿಯೆ ಒಂದಾಗದಿದ್ದರೆ ದುಃಖವು ನಿಶ್ಚಿತ. ಪೈರನ್ನು ಕೊಯ್ದಮೇಲೆ ಹೊಲ ಕಾಯಬೇಕಾಗಿಲ್ಲ. ಆದರೆ ಪೈರನ್ನು ಕೊಯ್ಯುವರೆಗೆ ಅರಿವು ಮತ್ತು ಕ್ರಿಯೆ ಒಂದಾಗಿರಬೇಕಾಗುತ್ತದೆ ಎನ್ನುವುದು ಆತನ ನಿಲುವು. ಫಲವನ್ನು ಹೊತ್ತ ಪೈರಿನ ಹಾಗೆ, ಪೈರಿನೊಂದಿಗಿನ ಫಲದ ಹಾಗೆ. ಅರಿವು ಆಚರಣೆಯಲ್ಲಿರಬೇಕು; ಆಚರಣೆ ಅರಿವಿಗೆ ಅಂಟಿಕೊಂಡಿರಬೇಕು. ಈ ಸಾಧನೆ ಮಾಡಿದಾತನು ಶಿವಸ್ವರೂಪಿಯಾಗಿರುವನು ಎಂದು ಸಾರುತ್ತಾನೆ.

**ಕೃಷಿ ಕಾಯಕದ ಮಹತ್ವ:**

"ಕತ್ತಲೆಯಲ್ಲಿ ಹಾಲಕೊಂಡಡೆ ಸಿಹಿ ತಪ್ಪುವುದೆ?...."

"ತ್ರಿವಿಧಕ್ಕೆ ಗರ್ಭಗೆಚ್ಚು ಖಂಡಿತವಾಯಿತ್ತು...."

"ಅರಿದಡೆ ತಾನೆಂಬ ಮರೆದಡೆ ಜಗವೆಂಬ...."

"ನೀ ಕೊಟ್ಟ ಭೂಮಿಗೆ ಮುಂದೆ ಕರಲು, ಹಿಂದೆ ಇಗ್ಗರಲು,...."

"ಬಿತ್ತ ವಟ್ಟಕ್ಕೆ ದಿಕ್ಕಿಲ್ಲ...."

"ಪೈರಿಗೆ ನೀರು ಬೇಕೆಂಬಲ್ಲಿ ಉಚಿತವನರಿದು ಬಿಡಬೇಕು...."

"ತಾಪತ್ರಯದ ಮೆಟ್ಟ ನೇರಿ, ಪಾಪದ ಹೊಟ್ಟ ತೂರಿ...."

"ಗುತ್ತಿಗೆಕಾರಂಗೆ ಮತ್ತೆ ಕುಳುವುಂಟೆ ?...."

"ಉಳುವ ಒಕ್ಕಲಮಗನ ತಪ್ಪ ನೋಡದೆ ಒಪ್ಪುಗೊಳ್ಳಯ್ಯಾ..."

ಶರಣ ಒಕ್ಕಲಿಗ ಮುದ್ದಣ್ಣನ ಈ ವಚನಗಳ ಸಾಲುಗಳಲ್ಲಿ ಕೃಷಿ ಕಾಯಕದ ವಿಚಾರಗಳು ಹಾಗೂ ಆಚರಣೆ ಮತ್ತು ನಡೆ, ನುಡಿಯ ಮಾತುಗಳು, ಶಾಬ್ದಿಕ ಮಾಂತ್ರಿಕತೆ, ಅರ್ಥ ಸಿರಿವಂತಿಕೆಯಿಂದ ಕೂಡಿವೆ. ಕೃಷಿ ಕಾಯಕದಲ್ಲಿ ಕಾಣುವ ತೃಪ್ತಿ ಹಾಗೂ ಸಕಲ ಜೀವಿಗಳಿಗೆ ಆಶ್ರಯ ನೀಡುವ ಕಾಯಕದ ಬಗ್ಗೆ ಅತ್ಯಂತ ಗೌರವ ಹಾಗೂ ವಿಶ್ವಾಸಗಳು ಎದ್ದು ಕಾಣುತ್ತವೆ. ಮುದ್ದಣ ಅನುಭವ ಮಂಟಪದಲ್ಲಿ ಕೃಷಿಕಾಯಕದ ಪ್ರತಿ ನಿಧಿಯಾಗಿ, ಕೃಷಿ ಕಾಯಕದ ಮಹಿಮೆಯನ್ನು ಉಳಿದ ಶರಣರಿಗೆ ತಿಳಿಸುವ ಕೆಲಸವನ್ನು ಮಾಡಿದ್ದಾನೆ ಎಂದು ಸಹ ಹೇಳಬಹುದು. ಕೃಷಿಯೇ ಜೀವನವೆಂದು ಭಾವಿಸಿ ಬದುಕಿ ಬಾಳಿ ತೋರಿಸಿದ ಒಕ್ಕಲಿಗ ಮುದ್ದಣ್ಣನು ನಿಜವಾಗಿಯೂ ನಮಗೆ ಆದರ್ಶಪ್ರಾಯನಾಗಿ ನಿಲ್ಲುತ್ತಾನೆ.

**ಪರಾಮರ್ಶನೆ:**


1. ಸಮಗ್ರ ವಚನ ಸಂಪುಟ:ಒಂದು – (ಸಂ.) ಡಾ.ಎಂ.ಎಂ.ಕಲಬುರ್ಗಿ, 2001
2. ಶರಣ ಒಕ್ಕಲಿಗ ಮುದ್ದಣ್ಣ – ಎಸ್. ಶಿವರಾಜಪ್ಪ, 1999
3. "ಪೈರಿಗೆ ನೀರು" – ರಂಜಾನ್ ದರ್ಗಾ
4. (ವಚನ ಬೆಳಕು – ಅಂಕಣ ಬರಹ: ҳಣಣಠಿ://ಟ.ತಚಿಡಿಣಞಚಿಫುಚಿಡಿಚಿಣು.ಟಿ/ಚಿಡಿಣುಛಿಟಜ/2018_04_07/)